ಹೋಗಿ ಮಕ್ಕಳನ್ನೆಲ್ಲಾ ನಿಲ್ಲಿಸುವುದು ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೋಸ್ಕರ ಒಂದು ಟೋಕನ್ ವ್ಯವಸ್ಥೆಯನ್ನೂ ಮಾಡುತ್ತಿದ್ದೇವೆ. ಇನ್ನೂ ಕೆಲವು ಕಡೆ by appointments, ಅವರಿಗೆ ಮುಂಚೆಯೇ ಹೋಗಿ ತಿಳಿಸಿ, ಆಗ ಅವರು ಹೋಗಿ ಆಧಾರ್ ಕಾರ್ಡ್ ತೆಗೆದುಕೋಳ್ಳುವಂತಹ ವ್ಯವಸ್ಥೆ ನಾವು ಮಾಡುತ್ತೇವೆ. ಯಾವುದೇ ರೀತಿ ನಾಗರಿಕರಿಗೆ ತೊಂದರೆಯಾಗುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಶ್ರೀ ಸೋಮಲಿಂಗಪ್ಪನವರು ಹಾಜರಿಲ್ಲ. ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಮಾತನಾಡುವುದು.

4. ವಿಷಯ : ಜಮಖಂಡಿ ತಾಲ್ಲೂಕಿನ ಕೃಷ್ಣಾನದಿಯ ಎಡದಂಡೆ ಭಾಗದಲ್ಲಿ ಅತಿಯಾದ ನೀರಿನ ಬಳಕೆಯಿಂದ ಆಗಿರುವಂತಹ ಸವಳು–ಜವಳು ಕಡಿಮೆ ಮಾಡುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ನಾನು ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿಯ ಎಡದಂಡೆ ಭಾಗದಲ್ಲಿ ಅತಿಯಾದ ನೀರಿನ ಬಳಕೆಯಿಂದ ಆಗಿರುವಂತಹ ಸವಳು–ಜವಳು ಕಡಿಮೆ ಮಾಡುವ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು, ಆ ಭೂಮಿಯ ಫಲವತ್ತತೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ, ಬೆಳಗಾಂನ ಕಾಡಾ (CADA) ಎನ್ನುವ ಸಂಸ್ಥೆಗೆ ವ್ಯಾಪ್ತಿಯಲ್ಲಿರದ ವಿಷಯ ನಾನು ಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ತಂದ ನಂತರ, ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಈ ಒಂದು ಪ್ರದೇಶವನ್ನೂ ಜೋಡಿಸಿದ್ದರಿಂದ ಸಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಆ ಒಂದು ಭಾಗದಲ್ಲಿ ಸವಳು–ಜವಳು ತೆಗೆಯುವ ಸಲುವಾಗಿ ಸುಮಾರು 6–7 ಕೋಟಿ ರೂ.ಗಳ ಯೋಜನೆ ಆಗಿದೆ. ಅದನ್ನು ತಕ್ಷಣ ಕಾರ್ಯರೂಪಕ್ಕೆ ತಂದರೆ, ಇವತ್ತು ಸುಮಾರು ಸಾವಿರಾರು ಎಕರೆ ಜವಳಿನಿಂದ ಬಳಲುವ ಭೂಮಿ, ಪುನಃ ತನ್ನ ಫಲವತ್ತತೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿಯೇ ಆ ಒಂದು ಕ್ರಿಯೆಯನ್ನು ಮಾಡಿ, ಆ ಸವಳು–ಜವಳು ತೆಗೆಯುವಂತಹ ಕಾರ್ಯಕ್ರಮದಲ್ಲಿ ಅದನ್ನು ಸಂಪೂರ್ಣ ಜಾರಿಗೆ ತರಬೇಕೆನ್ನುವ ದೃಷ್ಟಿಯಿಂದ

ಶೂನ್ಯವೇಳೆಯಲ್ಲಿ ಮಾನ್ಯ ಬೃಹತ್ ಜಲಸಂಪನ್ಮೂಲ ಸಚಿವರು ಗಮನವನ್ನು ಸೆಳೆಯಲು ಬಯಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಜಮಖಂಡಿಯ ಶಾಸಕರಾದಂತಹ ಮಾನ್ಯ ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಕೃಷ್ಣಾ ನದಿ ಪಕ್ಕದಲ್ಲಿರತಕ್ಕಂಥ ಹಳ್ಳಿಗಳಲ್ಲಿ ಅತಿಯಾದಣತಹ ನೀರಿನ ಬಳಕೆಯಿಂದ ರೈತರ ಭೂಮಿ ಕೆಟ್ಟು ಹೋಗಿದೆ, ಸವಳು–ಜವಳು ಆಗಿದೆ ಎನ್ನುವುದಕ್ಕೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. 2013–14ನೇ ಸಾಲಿನಲ್ಲಿ ಸವಳು–ಜವಳು ಕಾರ್ಯಕ್ರಮಕ್ಕೆ ಹೆಚ್ಚಿನ ಅನುದಾನವನ್ನು ಕೂಟ್ಟು, ಮುಂದಿನ ವರ್ಷ, ಅಂದರೆ ಏಪ್ರಿಲ್ ಒಂದರ ನಂತರ ಏನು ಹೊಸ ವರ್ಷ ಪ್ರಾರಂಭವಾಗುತ್ತದೆ ಅದರಲ್ಲಿ ಕಯಗೊಳ್ಳುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಗೋಪಾಲ ಭಂಡಾರಿಯವರು ಮಾತನಾಡುವುದು.

5. ವಿಷಯ : ಉಡುಪಿ ಜಿಲ್ಲೆಯ ಹೆಬ್ರಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ.

ಶ್ರೀ ಹೆಚ್.ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ನಮ್ಮ ಉಡುಪಿ ಜಿಲ್ಲೆಯ ಹೆಬ್ರಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಕಳೆದ 30 ವರ್ಷಗಳಿಂದ ಆ ಭಾಗದ ಜನ ಹೋರಾಟ ಮಾಡುತ್ತಿದ್ದಾರೆ. ಕಾರ್ಕಳ ತಾಲ್ಲೂಕಿನ ಕೊನೆಯ ಗ್ರಾಮದಲ್ಲಿರುವಂತಹ ಹೆಬ್ರಿ, ಅದರ ಸುತ್ತಮುತ್ತಲಿನ ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕಾದರೆ ಕನಿಷ್ಟ 35 ಕಿ.ಮೀ.ಗಳಷ್ಟು ಹೋಗಬೇಕಾಗುತ್ತದೆ. ಆ ಪ್ರದೇಶದಲ್ಲಿ ತಾಲ್ಲೂಕು ಆಗುವುದೊಂದು ಬಿಟ್ಟು, ತಾಲ್ಲೂಕಿನಲ್ಲಿರತಕ್ಕಂಥ ಎಲ್ಲಾ ವ್ಯವಸ್ಥೆಗಳೂ ಕೂಡ ಇದೆ. ಅಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿ ಇದೆ. ಮಾನ್ಯ ಎಂ.ಬಿ. ಪ್ರಕಾಶ್ ಹಾಗೂ ಚಿರಂಜೀವಿ ಸಿಂಗ್‌ರವರ ನೇತೃತ್ವದಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿ ಆಯಿತು. ಆ ಸಮಿತಿ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದೆ. ನಾವೆಲ್ಲರೂ ಕೂಡ ಮನವಿಯನ್ನು ಸಲ್ಲಿಸಿದ್ದೇವೆ. ಆ ಮನವಿಯ ಪ್ರಕಾರ ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದೇವೆ. ಆ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಲಾಗಿದೆ 23 ಪುಟಗಳಷ್ಟು